ಅಸಲು ದಾವಾ ಸಂಖ್ಯೆ 265/2014 ಪಿ.ಡಬ್ಲ್ಯೂ 1

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾದ ದಿನಾಂಕ 15.09.2021.

ಮುಂದುವರೆದ ಪಾಟೀ ಸವಾಲು ಃ ಶ್ರೀ ಕೆ ಜಿ ನ್ಯಾಯಾವಾದಿಗಳಿಂದ ಃ

ಒಟ್ಟು 05 ಜಮೀನುಗಳಿಗೆ ಸಂಬಂಧಟಪಟ್ಟಂತೆ ಈ ದಾವೆಯನ್ನು ಹೂಡಿರುತ್ತೇನೆ. ನಾನು ಈ ದಾವೆಯನ್ನು ಸರ್ವೆ ನಂ. 73/3 ,18/4, 39/5, ಮತ್ತು 15/8 ಜಮೀನುಗಳಿಗೆ ಸಂಬಂದಪಟ್ಟಂತೆ ದಾವೆಯನ್ನು ಹೂಡಿರುತ್ತಾರೆ. ಸದರಿ ದಾವಾ ಸ್ವತ್ತುಗಳಿಗೆ ಸಂಬಂದಪಟ್ಟಂತೆ ನಾನು ದಾವೆಯನ್ನು ಹೂಡಿರುವುದಿಲ್ಲ ಎಂದರೆ ಸರಿಯಲ್ಲ. ಎ.ಸಿ ನ್ಯಾಯಾಲಯದಲ್ಲಿ ಆದೇಶವಾಗಿರುವ ಬಗ್ಗೆ ನಿಖರವಾಗಿ ಹೇಳಲು ಆಗುವುದಿಲ್ಲ. ತಹಸಿಲ್ದಾರರ ಆದೇಶ ಏನು ಆಗಿದೆ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ತಹಸಿಲ್ದಾರವರು ಆದೇಶ ಪ್ರತಿವಾದಿ ಪರ ಆದೇಶ ನೀಡಿರುತ್ತಾರೆ ಎಂದರೆ ಸರಿ. ತಹಸಿಲ್ದಾರರ ಆದೇಶವನ್ನು ನಾನು ಎಲ್ಲಿಯು ಪ್ರಶ್ನೆ ಮಾಡಿಲ್ಲ ಎಂದರೆ ಸರಿಯಲ್ಲ. ತಹಸಿಲ್ದಾರರ ಆದೇಶವನ್ನು ಪ್ರಶ್ನಿಸಿ ಎ.ಸಿ. ನ್ಯಾಯಾಲಯದಲ್ಲಿ ಮತ್ತು ಈ ನ್ಯಾಯಾಲಯದಲ್ಲಿ ಪ್ರಕರಣವನ್ನು ಹೂಡಿರುತ್ತೇವೆ. ಎ.ಸಿ. ನ್ಯಾಯಾಲಯದಲ್ಲಿ ಪ್ರಕರಣವನ್ನು ಹಾಕಿರುವ ದಾಖಲೆಯನ್ನು ನ್ಯಾಯಾಲಯದಲ್ಲಿ ಹಾಜರು ಮಾಡಿರುತ್ತೇನೆ. ಕ್ರಯ ಪತ್ರದ ಪ್ರಕಾರ ನಮ್ಮ ಹೆಸರಿನಲ್ಲಿ ದಾವಾ ಸ್ವತ್ತುಗಳು ಇರುತ್ತವೆ, ಮತ್ತು ಪ್ರತಿವಾದಿಗೆ ತೊಂದರೆ ನೀಡಲು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸಾಕ್ಷಿಯು ತೊಂದರೆ ಕೊಡಲು ಹೂಡಿರುವುದಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರಗಳನ್ನು ನಾವು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಚೆನ್ನಮ್ಮನವರಿಗೆ ವಾರಸ್ಸು ದಾರರು ಇದ್ದಾರೆ ಎಂದರೆ ಸರಿಯಲ್ಲ.

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ